# ಪಾರ್ವತಿ ಎಂಬ ಜಾಣೆ



ಸಂಸಾರದ ನೊಗವನ್ನು ಹೊರಲು ಕೇರಳದ ಸಾವಿರಾರು ಹೆಣ್ಣುಮಕ್ಕಳು ಕೊಲ್ಲಿ ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. 'ಟೇಕಾಫ್' ಮಲಯಾಳಂ ಸಿನಿಮಾದಲ್ಲಿ ಪಾರ್ವತಿ ನಿರ್ವಹಿಸಿದ್ದು ಇಂತಹದ್ದೇ ಒಂದು ಪಾತ್ರ. ಆದರೆ ಇಲ್ಲಿ ಆಕೆ ಮುಸ್ಲಿಂ ಕುಟುಂಬಕ್ಕೆ ಸೇರಿದ, ತಲಾಖ್ ಪಡೆದವಳು. ಇರಾಕ್‌ನಲ್ಲಿ ದೊಡ್ಡ ಮೊತ್ತದ ಸಂಬಳಕ್ಕೆ ಆಸೆಪಟ್ಟು ಅಲ್ಲಿಗೆ ಹಾರುವ ಈ ಹೆಣ್ಣುಮಗಳು, ಅಲ್ಲಿ ಉಗ್ರಗಾಮಿಗಳ ಕೈಗೆ ಸಿಕ್ಕು ಒತ್ತೆಯಾಳಾಗಿ ಪಟ್ಟ ಸಂಕಟಗಳೇ ಚಿತ್ರದ ಮುಖ್ಯ ಕಥಾವಸ್ತು. ಪಾತ್ರಕ್ಕೆ ಜೀವ ತುಂಬಿದ ಪಾರ್ವತಿ, ಇದೀಗ ಅರ್ಹವೆಂಬಂತೆ ಗೋವಾದಲ್ಲಿ ನಡೆದ 'ಇಫಿ' ಚಿತ್ರೋತ್ಸವದಲ್ಲಿ ಅತ್ಯುತ್ತಮ ನಟನೆಗಾಗಿ ರಾಷ್ಟ್ರಪ್ರಶಸ್ತಿ ಗೆದ್ದಿದ್ದಾಳೆ.

ಮಲಯಾಳಂ ಚಿತ್ರರಂಗದಲ್ಲಿ ತುಂಬ ಸೂಕ್ಷ್ಮಮತಿ ನಟಿ ಎಂದು ಹೆಸರು ಪಡೆದವಳೀಕೆ. ಮಹಿಳೆಯರನ್ನು ಸಿನಿಮಾಗಳಲ್ಲಿ ಕೇವಲ ಬಣ್ಣದ ಗೊಂಬೆಯಾಗಿ ತೋರಿಸುವ ಪ್ರವೃತ್ತಿಯ ವಿರುದ್ಧ ಬಹಿರಂಗವಾಗಿ ಮಾತನಾಡಿದವಳು. ಈಕೆ ಚಿತ್ರಗಳನ್ನು ಆಯ್ಕೆ ಮಾಡುವಾಗ ಬಹಳ ಚೂಸಿ. ಅಭಿನಯಕ್ಕೆ ಸೂಕ್ತ ಅವಕಾಶ ಇದ್ದರೆ ಮಾತ್ರ ಸೈ ಎನ್ನುವಾಕೆ. ಹಾಗೆಂದೇ ಈಕೆ ನಟಿಸಿದ ಚಿತ್ರಗಳ ಸಂಖ್ಯೆ ವರ್ಷಕ್ಕೆ ಒಂದೆರಡನ್ನು ಮೀರಲಿಲ್ಲ.

ಅಪ್ಪ– ಅಮ್ಮ ಇಬ್ಬರೂ ಕಲ್ಲಿಕೋಟೆಯಲ್ಲಿ ವಕೀಲರು. ಹೈಸ್ಕೂಲ್ ದಿನಗಳಲ್ಲೇ ಭರತನಾಟ್ಯ ಕಲಿತ ಪಾರ್ವತಿ ಬಿಎ ಇಂಗ್ಲಿಷ್ ಲಿಟರೇಚರ್ ಮುಗಿಸಿದ್ದಾಳೆ. ಪೂರ್ಣಪ್ರಮಾಣದ ಮ್ಯೂಸಿಕ್ ಚಾನೆಲ್ ಕಿರಣ್ ಟಿವಿ ಯಲ್ಲಿ ಆ್ಯಂಕರ್ ಆಗಿ ಜನಪ್ರಿಯತೆ ಗಳಿಸಿದಾಕೆ. ಈಗ ಅಂಚೆ ಮೂಲಕ ಇಂಗ್ಲಿಷ್ ಎಂ.ಎ ಕಲಿಯುತ್ತಿದ್ದಾಳೆ.

2006ರಲ್ಲಿ ಮಲಯಾಳಂ ಚಿತ್ರ 'ಔಟ್ ಆಫ್ ಸಿಲೆಬಸ್'ನಲ್ಲಿ ಈಕೆಯದ್ದು ಪೋಷಕ ಪಾತ್ರ. ಎರಡನೇ ಚಿತ್ರ 'ನೋಟ್‌ಬುಕ್', ಅದರಲ್ಲೂ ಪೋಷಕ ಪಾತ್ರವೇ. ಈ ಚಿತ್ರಕ್ಕೆ ಪಾರ್ವತಿ ಸಹಿತ ಮೂವರನ್ನು ಆಯ್ಕೆ ಮಾಡಲು ನಿರ್ದೇಶಕರು ಐದು ಸಾವಿರ ಹುಡುಗಿಯರನ್ನು ಸಂದರ್ಶನ ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು!

ಹಾಗೆ ನೋಡಿದರೆ, ಈಕೆ ಮೊದಲ ಯಶಸ್ಸು ಕಂಡದ್ದು ಕನ್ನಡದಲ್ಲಿ. ಮೊತ್ತ ಮೊದಲ ಪೂರ್ಣಪ್ರಮಾಣದ ಹೀರೋಯಿನ್ ಪಾತ್ರ ಸಿಕ್ಕಿದ್ದು ಕನ್ನಡದ 'ಮಿಲನ' ಚಿತ್ರದಲ್ಲಿ; ಪುನೀತ್ ರಾಜ್‌ಕುಮಾರ್ ಎದುರು. 'ಮಿಲನ'ದಲ್ಲಿ ಈಕೆಯ ನಟನೆಗೆ ಅದ್ಭುತ ಪ್ರತಿಕ್ರಿಯೆ ಸಿಕ್ಕಿತು. ಚಿತ್ರ ಶತದಿನೋತ್ಸವವನ್ನೂ ದಾಟಿ ಬಾಕ್ಸಾಫೀಸ್ ದಾಖಲೆ ನಿರ್ಮಿಸಿತು.

ಈ ಯಶಸ್ಸಿನ ಹಿನ್ನೆಲೆಯಲ್ಲೇ ಮೋಹನ್‌ಲಾಲ್ ನಟಿಸುವ ಚಿತ್ರದಲ್ಲಿ ಅಭಿನಯಿಸಲು ಕರೆ ಬಂತು. ಸಿಬಿ ಮಲಯಿಲ್ ನಿರ್ದೇಶನದ 'ಫ್ಲಾಶ್'ನಲ್ಲಿ ಜತೆಗೆ ಇಂದ್ರಜಿತ್ ಇದ್ದರೂ, ಚಿತ್ರ ಫ್ಲಾಪ್ ಆಗಿ ಪಾರ್ವತಿ ತೆರೆಮರೆಗೆ ಸರಿದಳು.

ಈ ಸಂದರ್ಭದಲ್ಲಿ ಪಾರ್ವತಿಯನ್ನು ಮತ್ತೆ ಕೀರ್ತಿಶಿಖರಕ್ಕೆ ಏರಿಸಿದ್ದು 'ಪೂ' ಎನ್ನುವ ತಮಿಳು ಚಿತ್ರ. ಸಸಿ ನಿರ್ದೇಶನದ ಈ ಚಿತ್ರದಲ್ಲಿ ನಟಿಸಲೆಂದೇ ಸುಮಾರು 12 ಚಿತ್ರಗಳ ಅವಕಾಶಗಳನ್ನು ಈಕೆ ಕೈಚೆಲ್ಲಿದ್ದಳು. ಬೆಳ್ಳಗಿದ್ದ ಹುಡುಗಿ ಮಾಸಲು ಕಪ್ಪು ಬಣ್ಣದವಳಾಗಲು ಸ್ಕಿನ್ ಟೋನ್ ಮಾಡಿಸಿಕೊಂಡಳು! ಪಟಾಕಿ ಕಾರ್ಖಾನೆಗೆ ಭೇಟಿ ಅಲ್ಲಿನ ಕಾರ್ಮಿಕರ ಸ್ಥಿತಿ ಗತಿಯನ್ನು ಅಧ್ಯಯನ ಮಾಡಿದಳು. ಚಿತ್ರದಲ್ಲಿ ಆಕೆಯದ್ದು ಮಾರಿ ಎಂಬ ತಮಿಳು ತರುಣಿಯ ಪಾತ್ರ. ಚಿತ್ರ ಗೆದ್ದಿತು. ಅತ್ಯುತ್ತಮ ನಟಿ (ತಮಿಳು) ಫಿಲಂಫೇರ್ ಪ್ರಶಸ್ತಿಯ ಜತೆಗೆ ಹತ್ತಾರು ಪ್ರಶಸ್ತಿಗಳು ಬಗಲಿಗೇರಿದವು. ಜತೆಗೇ ಬಂದ 'ಟ್ರಾಫಿಕ್' ವಿಮರ್ಶಕರ ಮನಗೆದ್ದಿತು.

ಮತ್ತೆ ಕನ್ನಡದಲ್ಲಿ ನಟಿಸಲು ಬಂದಿದ್ದು ಅದೇ ಪುನೀತ್‌ರ 'ಪೃಥ್ವಿ' ಚಿತ್ರಕ್ಕೆ. ಬಳ್ಳಾರಿಯ ಗಣಿಗಾರಿಕೆಯ ಅಕ್ರಮಗಳ ವಿರುದ್ಧ ಜಿಲ್ಲಾಧಿಕಾರಿಯೊಬ್ಬ ಎದೆಯುಬ್ಬಿಸಿ ನಿಲ್ಲುವ ಚಿತ್ರಕಥೆ ಅತ್ಯುತ್ತಮವಾಗಿದ್ದರೂ, ಪಾರ್ವತಿಯದ್ದು ಅಂತಹ ಪ್ರಮುಖ ಪಾತ್ರವೇನಲ್ಲ. ಪಾರ್ವತಿ ನಟಿಸಿದ ಮೂರನೇ ಕನ್ನಡ ಚಿತ್ರ ವಿಜಯಲಕ್ಷ್ಮಿ ಸಿಂಗ್ ನಿರ್ದೇಶನದ 'ಮಳೆ ಬರಲಿ ಮಂಜು ಇರಲಿ' (2009) ದೊಡ್ಡ ಮಟ್ಟದಲ್ಲಿ ಸುದ್ದಿ ಮಾಡಲಿಲ್ಲ. ಆ ವರ್ಷ ಬಿಡುಗಡೆಯಾದ ಈಕೆಯ ಏಕೈಕ ಚಿತ್ರವದು.

2015ರಲ್ಲಿ ಈಕೆಗೆ ಖ್ಯಾತಿ ತಂದುಕೊಟ್ಟ ಚಿತ್ರ 'ಇನ್ನು ನಿಂಡೆ ಮೊಯ್ದೀನ್'. ನಾಯರ್ ಹುಡುಗಿಯೊಬ್ಬಳು ಮುಸ್ಲಿಂ ಹುಡುಗನ ಪ್ರೇಮಜಾಲಕ್ಕೆ ಬೀಳುವ ಚಿತ್ರ ನೈಜಘಟನೆಯ ಆಧಾರಿತ. ಈ ಚಿತ್ರದ ನಟನೆಗೂ ಪ್ರಶಸ್ತಿಗಳ ಸುರಿಮಳೆಯಾಯಿತು. ಧನುಶ್ ಜತೆ ತಮಿಳಿನಲ್ಲಿ 'ಮರಿಯನ್' ಚಿತ್ರದಲ್ಲಿ ನಟಿಸಲು ಮೀನುಗಾರ್ತಿಯೊಬ್ಬಳ ಜತೆ ಕೆಲ ದಿನ ಕಳೆದ ಪಾರ್ವತಿ ಸಮುದ್ರದಾಳದಲ್ಲಿ ಈಜುವುದನ್ನೂ ಕಲಿತಳು!

ಈಗ ಪಾರ್ವತಿ ಕೇರಳದಲ್ಲಿ ಮನೆಮಾತು. ಏಕೆಂದರೆ ಇಫಿ ಚಿತ್ರೋತ್ಸವದಲ್ಲಿ ರಾಷ್ಟ್ರಪ್ರಶಸ್ತಿ ಗೆದ್ದ ಮೊದಲ ಮಲಯಾಳಂ ನಟಿ ಈಕೆ. ರಾಷ್ಟ್ರಪ್ರಶಸ್ತಿ ಗೆಲ್ಲುವ ಹೊತ್ತಿಗೇ ಬಾಲಿವುಡ್‌ನಲ್ಲಿ ಈಕೆ ನಟಿಸಿದ 'ಕರೀಬ್ ಕರೀಬ್ ಸಿಂಗಲ್ಸ್' ಸಿನಿಮಾ ಕೂಡಾ ಸುದ್ದಿ ಮಾಡಿದೆ. ಸದ್ಯಕ್ಕೆ ಎರಡು ಮಲಯಾಳಂ ಮತ್ತು ಒಂದು ತಮಿಳು ಸಿನಿಮಾ ಈಕೆಯ ಕೈಯಲ್ಲಿದೆ. ಈಕೆಯ ಕಾಲ್‌ಶೀಟ್‌ಗಾಗಿ ಬಾಲಿವುಡ್ ಕಾಯುತ್ತಿದೆ. ಆದರೆ ಈಕೆ ಹಿಂದಿನಂತೆಯೇ ಬಲು ಚೂಸಿ.

■ ಬಿಂದು